90 and others who are eligible are brought on to monthly rated establishment and regularised as and when they complete 10 years of service. According to the information available with the Govt. 37,562 Daily Wage Employees who become eligible for regularisation between 31.12.90 and 31.12.92, have been regularised. A committee is reviewing the implementation of this process.

c) According to the Supreme Court orders, the process shall be completed by 31-12-1997.

ವಿಷಯ : ಕುಂದಾಪುರ ವಿಧಾನ ಸಭಾಕ್ಷೇತ್ರ ಗಂಗೊಳ್ಳಿಯಲ್ಲಿ ಪೋಲಿಸ್ ಠಾಣೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 457 (675)

ಶ್ರೀ. ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ವಿಧಾನಸಭಾ ವ್ಯಾಪ್ತಿಯಲ್ಲಿರುವ ಗಂಗೊಳ್ಳಿಯಲ್ಲಿ ಪೋಲಿಸ್ ಠಾಣೆಯನ್ನು ಪ್ರಾರಂಭಿಸುವ ಯೋಜನೆ ಸರ್ಕಾರದ ಮುಂದಿದೆಯೇ ?

ಆ) ಈ ವಿಷಯದಲ್ಲಿ ಮುಖ್ಯಮಂತ್ರಿಗಳು ಪೋಲೀಸ್ ಠಾಣೆ ಮಂಜೂರು ಮಾಡುವ ಬಗ್ಗೆ ಹೇಳಿಕೆ ನೀಡಿರುವುದು ನಿಜವೇ ?

ಇ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ. ಚೌಡರೆಡ್ಡಿ (ಗೃಹ ಸಚಿವರು):-

ಅ) ಸರ್ಕಾರವು ಆದೇಶ ಸಂಖ್ಯೆ : ಹೆಚ್. ಡಿ. 56 ಪಿಒಪಿ 94, ದಿನಾಂಕ : 8-7-94ರಲ್ಲಿ ಗಂಗೊಳ್ಳಿಯಲ್ಲಿ ಈಗಾಗಲೇ ಪೋಲೀಸ್ ಠಾಣೆ ತೆರೆಯಲು ಮಂಜೂರಾತಿ ನೀಡಿದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ವಿಷಯ : ಕುಂದಾಪುರದ ಸಂಜೀವ ಖಾರ್ವಿಯ ಪ್ರಕರಣ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 458 (877)

ಶ್ರೀ. ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ಪೋಲೀಸ್ ಠಾಣೆ ಲಾಕಪ್‌ನಲ್ಲಿ ಅಸುನಿಗೀದ ಸಂಜೀವ ಖಾರ್ವಿಯ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಳಪಡಿಸುವ ಯೋಜನೆ ಸರ್ಕಾರಕ್ಕೆ ಇದೆಯೇ ?

ಆ) ಯೋಜನೆ ಇದ್ದಲ್ಲಿ ಸದರೀ ತನಿಖೆಯನ್ನು ಎಂದಿನಿಂದ ಆರಂಭಿಸಲಾಗುವುದು.

ಇ) ಕುಂದಾಪುರದ ಲಾಕಪ್ ಡೆತ್‌ನಲ್ಲಿ ಸಂಜೀವ ಖಾರ್ವಿಯ ಸಾವಿಗೆ ಕಾರಣರಾದ ಅಪರಾಧಿಗಳು ಯಾರು ಅವರ ಮೇಲೆ ತೆಗೆದುಕೊಂಡ ಕಾನೂನು ಕ್ರಮಗಳೇನು ?

ಶ್ರೀ. ಚೌಡರೆಡ್ಡಿ (ಗೃಹ ಸಚಿವರು) :-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಕುಂದಾಪುರ ಪೋಲೀಸ್ ಠಾಣೆಯಲ್ಲಿ ಶ್ರೀ. ಸಂಜೀವಖಾರ್ವಿರವರ ಲಾಕಪ್ ಸಾವಿನ ಬಗ್ಗೆ ದಿನಾಂಕ 1-7-94ರಂದು ಸಿಒಡಿ ತನಿಖೆಗೆ ಕೈಗೆತ್ತಿಕೊಳ್ಳಲಾಗಿದೆ. ಆರೋಪಿತ ಪೋಲೀಸ್ ಸಿಬ್ಬಂದಿಯವರಾದ ಹೆಚ್. ಸಿ. 752 ನಾರಾಯಣ ಪಿಸಿ 1207 ಸೀತಾರಾಮ, ಪಿಸಿ 1140 ಸುರೇಶ ಮತ್ತು ಪಿಸಿ 372 ವಿರೇಂದ್ರ ಕುಮಾರ ಇವರುಗಳನ್ನು ಅಮಾನತ್ತಿನಲ್ಲಿ ಇಡಲಾಗಿದ್ದು ತನಿಖೆಯು ಪ್ರಗತಿಯಲ್ಲಿದೆ.

ವಿಷಯ : ಸೋಮವಾರಪೇಟೆ ತಾಲ್ಲೂಕಿನ ಶನಿವಾರ ಸಂತೆಯಲ್ಲಿ ಬಸ್‌ಸ್ಟ್ಯಾಂಡನ್ನು ನಿರ್ಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 460(38)

ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರ ಪೇಟೆ) :- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸೋಮವಾರಪೇಟೆ ತಾಲ್ಲೂಕಿನ ಶನಿವಾರ ಸಂತೆಯಲ್ಲಿ ಸರ್ಕಾರದಿಂದ ಬಸ್‌ಸ್ಟ್ಯಾಂಡನ್ನು ನಿರ್ಮಿಸಲು ಸರ್ವೆ ಕಾರ್ಯ ಮುಗಿದಿದೆಯೇ, ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸರ್ವೆ ಕಾರ್ಯ ಮುಗಿದಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು .

ಇ) ಇದಕ್ಕೆ ಎಷ್ಟು ಹಣ ಮಂಜೂರಾಗಿದೆ ?

ಶ್ರೀ. ಭೀಮಣ್ಣಖಂಡ್ರೆ (ಸಾರಿಗೆ ಸಚಿವರು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ